ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯಃ ನ.ರಾ.ಪುರ

ಸಿ.ಸಿ. ನಂಃ **522/2024**

ಫಿರ್ಯಾದುದಾರರು : ಸರ್ಕಾರದ ಪರವಾಗಿ ಅಬಕಾರಿ ನಿರೀಕ್ಷಕರು,
ನ.ರಾ.ಪುರ ವಲಯ, ನ.ರಾ.ಪುರ.

:ವಿ:

ಆರೋಪಿ : ದಯಾನಂದ ಹೆಚ್.ಕೆ., ಬಿನ್. ಲೇಟ್ ಕೃಷ್ಣಗೌಡ ಹೆಚ್.ಆರ್.,
57 ವರ್ಷ, ವಾಸಃ ಹಂತುವಾನಿ, ಹೊನ್ನೇಕೂಡಿಗೆ ಗ್ರಾಮ,
ನ.ರಾ.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

----

ದೋಷಾರೋಪಣೆ

ಜೀತು ಆರ್.ಎಸ್., ಬಿ.ಎ.ಎಲ್, ಎಲ್.ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ., ನ.ರಾ.ಪುರ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 28.3.2024 ರಂದು ಮದ್ಯಾಹ್ನ 3.30 ಗಂಟೆಯ ಸಮಯದಲ್ಲಿ ಹೊನ್ನೇಕೂಡಿಗೆ ಗ್ರಾಮದ ಹಂತುವಾನಿಯಲ್ಲಿ ನೀವು ಆರೋಪಿ ನಿಮ್ಮ ವಾಸದ ಮನೆಯ ಎಡಭಾಗದಲ್ಲಿರುವ ಕೊಠಡಿಯ ಮಲಗುವ ಮಂಚದ ಕೆಳಗೆ ಯಾವುದೇ ಅಧಿಕೃತ ಪರವಾನಗೆ ಇಲ್ಲದೇ ಅಕ್ರಮವಾಗಿ ಎರಡು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ತಲಾ 90 ಮಿಲಿಯ ಒರಿಜಿನಲ್ ಚಾಯ್ಸ್ ವಿಸ್ಕಿಯ ಮದ್ಯ ತುಂಬಿದ 190 ಟೆಟ್ರಾ ಪ್ಯಾಕೇಟುಗಳು ಒಟ್ಟು 17.100 ಲೀಟರ್ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ಸ್ವಾಧೀನ ಹೊಂದಿ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 14 ನ್ನು ಉಲ್ಲಂಘಿಸಿ ಸದರಿ ಕಾಯಿದೆಯ ಕಲಂ 32 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ನೀವು ಆರೋಪಿ ಯಾವುದೇ ಅಧಿಕೃತ ಪರವಾನಗೆ ಇಲ್ಲದೇ ಅಕ್ರಮವಾಗಿ ಎರಡು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ತಲಾ 90 ಮಿಲಿಯ ಒರಿಜಿನಲ್ ಚಾಯ್ಸ್ ವಿಸ್ಕಿಯ ಮದ್ಯ ತುಂಬಿದ 190 ಟೆಟ್ರಾ ಪ್ಯಾಕೇಟುಗಳು ಒಟ್ಟು 17.100 ಲೀಟರ್ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿ ಇಡಲು ನಿಮ್ಮ ವಾಸದ ಮನೆಯನ್ನು ಬಳಸಿಕೊಂಡು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 15 ನ್ನು ಉಲ್ಲಂಘಿಸಿ ಸದರಿ ಕಾಯಿದೆಯ ಕಲಂ 38(ಎ)ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಪ್ರ:1: ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ?

ಉ : ಅರ್ಥವಾಯಿತು. ತಪ್ಪು ಮಾಡಿಲ್ಲ.

ಪ್ರ:2:ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉ : ವಿಚಾರಣೆಯಾಗಬೇಕು.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : 11 ನೇ ದಿವಸ, ನವೆಂಬರ್ ಮಾಹೆ, 2025.

ದಾಮೋದರ.

11/11/25

(ಜೀತು ಆರ್.ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ನ.ರಾ. ಪುರ